# ವ್ಯಾಲೆಂಟೈನ್ ಕಲ್ಲಂಗಡಿ!






'ಪ್ರೇಮಿಗಳ ದಿನಾಚರಣೆ'ಯ ಸಂದರ್ಭದಲ್ಲಿ ತಮ್ಮ ಪ್ರೀತಿ ಪಾತ್ರರಿಗೆ ಏನಾದರೂ ವಿಶಿಷ್ಟ ಉಡುಗೊರೆ ನೀಡುವ ತವಕದಲ್ಲಿ ಇರುತ್ತಾರೆ. ಹಾಗೆಯೇ ಪ್ರೇಮದ ಚಿಹ್ನೆಯಾಗಿರುವ ಹೃದಯದ ಆಕಾರದಲ್ಲಿರುವ ಅನೇಕ ವಸ್ತುಗಳನ್ನು ನಾವು ನೋಡಿಯೇ ಇರುತ್ತೇವೆ.

ಆದರೆ ಜಪಾನೀಯರು ಅತೀ ವಿಶಿಷ್ಟವಾದ ಹೃದಯಾಕಾರದ ಕಲ್ಲಂಗಡಿಯನ್ನೇ ಬೆಳೆದಿದ್ದಾರೆ! ಇವು ಇಲ್ಲಿನ ಮಾರುಕಟ್ಟೆಯಲ್ಲಿ ಅನೇಕ ಹೃದಯವಂತರ ಮನಸೂರೆಗೊಂಡಿವೆ. ಜಪಾನ್‌ನ ದಕ್ಷಿಣದ ಕೈಷು ದ್ವೀಪದಲ್ಲಿ ಇಂತಹ ಕಲ್ಲಂಗಡಿಗಳನ್ನು ಬೆಳೆದಿದ್ದಾರೆ. ಈ ಹೃದಯಾಕಾರದ ಕಲ್ಲಂಗಡಿ ಬೆಳೆಯ ಹಿಂದಿನ ಮಾಸ್ಟರ್‌ಮೈಂಡ್ ಹಿರೊಚಿಕಿಮುರಾ ಮತ್ತು ಈತನ ಹೆಂಡತಿಯದ್ದು.

ಈ ಕೃಷಿಕ ದಂಪತಿಗೆ ಇಂತಹ ಪರಿಪೂರ್ಣ ಹೃದಯಾಕಾರದ ಕಲ್ಲಂಗಡಿಯನ್ನು ಸೃಷ್ಟಿಸಲು ಮೂರು ವರ್ಷಗಳು ಬೇಕಾಯಿತಂತೆ. 'ಈ ಹೃದಯಾಕಾರದ ಕಲ್ಲಂಗಡಿಯು ನಮ್ಮಿಬ್ಬರ ಪರಸ್ಪರ ಪ್ರೇಮದ ಹಾಗೂ ನಮ್ಮ ಕೃಷಿ ಪ್ರೀತಿಯ ಪ್ರತೀಕ' ಎಂದು ಹಿರೊಚಿಕಿಮುರಾ ಸಂದರ್ಶನವೊಂದರಲ್ಲಿ ತಿಳಿಸಿದ್ದಾನೆ. ಮೊದಲ ಬಾರಿಯ ಬೆಳೆಯಲ್ಲಿ ಕೇವಲ 20ರಷ್ಟು ಇಂತಹ ವಿಶೇಷ ಕಲ್ಲಂಗಡಿಗಳನ್ನು ಮಾತ್ರ ಬೆಳೆಯಲು ಸಾಧ್ಯವಾಗಿದೆಯಂತೆ.

ಈ ಸಲದ್ದು ಮುಗಿಯಿತು. ಮುಂದಿನ ಸಲವಾದರೂ 'ವ್ಯಾಲಂಟೈನ್ಸ್ ಡೇ'ಯಂದು ನಿಮ್ಮ ಪ್ರೇಮಿಗೆ ಈ ವಿಶಿಷ್ಟ ಉಡುಗೊರೆಯನ್ನು ನೀಡಿ ಮನ ತಣಿಸಲು ಬಯಸುವಿರಾ? ಹಾಗಾದರೆ 15,750 ಯೆನ್‌ಗಳನ್ನು ಪರ್ಸ್‌ನಲ್ಲಿ ಇರಿಸಿಕೊಂಡು ಜಪಾನ್‌ಗೆ ದೌಡಾಯಿಸಿ!

■ ವಿದ್ಯಾ ವಿ. ಹಾಲಭಾವಿ